# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆಂಟನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

**ಶುಕ್ರವಾರ, ದಿನಾಂಕ:23ನೇ ಡಿಸೆಂಬರ್, 2022**

**(ಸಮಯ: ಬೆಳಗ್ಗೆ: 10.30 ಗಂಟೆಗೆ)**

* * *

### 01. ಉಪ ಸಭಾಪತಿ ಸ್ಥಾನಕ್ಕೆ ಚುನಾವಣೆ

01. ಶ್ರೀ **ಕೋಟ ಶ್ರೀನಿವಾಸ ಪೂಜಾರಿ** ಅವರು ಶ್ರೀ **ಪ್ರಾಣೇಶ್ ಎಂ.ಕೆ.** ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುವುದು.

    **ಡಾ. ವೈ.ಎ. ನಾರಾಯಣಸ್ವಾಮಿ** ಅವರು ಪ್ರಸ್ತಾವನೆಯನ್ನು ಅನುಮೋದಿಸುವುದು.

02. ಶ್ರೀ **ಎಸ್.ರುದ್ರೇಗೌಡ** ಅವರು ಶ್ರೀ **ಪ್ರಾಣೇಶ್ ಎಂ.ಕೆ.** ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುವುದು.

    ಶ್ರೀ **ಪ್ರತಾಪ್ ಸಿಂಹ ನಾಯಕ್ ಕೆ.** ಅವರು ಪ್ರಸ್ತಾವನೆಯನ್ನು ಅನುಮೋದಿಸುವುದು.

03 **ಡಾ. ತಳವಾರ್ ಸಾಬಣ್ಣ** ಅವರು ಶ್ರೀ **ಪ್ರಾಣೇಶ್ ಎಂ.ಕೆ.** ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುವುದು.

    **ಶ್ರೀಮತಿ ಹೇಮಲತಾ ನಾಯಕ** ಅವರು ಪ್ರಸ್ತಾವನೆಯನ್ನು ಅನುಮೋದಿಸುವುದು.

04. ಶ್ರೀ **ಅರುಣ್ ಡಿ.ಎಸ್.** ಅವರು ಶ್ರೀ **ಪ್ರಾಣೇಶ್ ಎಂ.ಕೆ.** ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುವುದು.

    ಶ್ರೀ **ನವೀನ್ ಕೆ.ಎಸ್.** ಅವರು ಪ್ರಸ್ತಾವನೆಯನ್ನು ಅನುಮೋದಿಸುವುದು.

05. ಶ್ರೀ **ಬಿ.ಕೆ. ಹರಿಪ್ರಸಾದ್** **ಅವರು** ಶ್ರೀ **ಅರವಿಂದ ಕುಮಾರ್ ಅರಳಿ** ಅವರನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುವುದು.

    ಶ್ರೀ **ಮಂಜುನಾಥ್ ಭಂಡಾರಿ** ಅವರು ಪ್ರಸ್ತಾವನೆಯನ್ನು ಅನುಮೋದಿಸುವುದು.

### 02. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಐದನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಐದನೆಯ ಪಟ್ಟಿ

..2..

## 03. ಸಭೆಯ ಮುಂದಿಡಲಾಗುವ ಕಾಗದ ಪತ್ರ

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು) ಅವರು:–**

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಮಹಾನಗರ ಪಾಲಿಕೆಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–III) 31ನೇ ಮಾರ್ಚ್, 2021ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು (2022ನೇ ವರ್ಷದ ವರದಿ ಸಂಖ್ಯೆ–6) ಸಭೆಯ ಮುಂದಿಡುವುದು.

## 04. ವರದಿಯನ್ನೊಪ್ಪಿಸುವುದು

**ಶ್ರೀ ಆಯನೂರು ಮಂಜುನಾಥ್** (ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ) 2022–23ನೇ ಸಾಲಿನ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನೊಪ್ಪಿಸುವುದು.

## 05. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆ

1. **ಶ್ರೀಯುತರುಗಳಾದ;–**

| | |
|---|---|
| ಬಿ.ಕೆ.ಹರಿಪ್ರಸಾದ್, ಮಾನ್ಯ ವಿರೋಧ ಪಕ್ಷದ ನಾಯಕರು, ಪ್ರಕಾಶ್ ಕೆ. ರಾಥೋಡ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಸಲೀಂ ಅಹಮದ್, ಕೆ.ಎ.ತಿಪ್ಪೇಸ್ವಾಮಿ, ಶರವಣ ಟಿ.ಎ. ಹಾಗೂ ಇತರರು. | ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸುವಲ್ಲಿ ಸರ್ಕಾರವು ವಿಫಲವಾಗಿರುವ ಕುರಿತು. |

2. ಕೆ.ಎ. ತಿಪ್ಪೇಸ್ವಾಮಿ, ಶರವಣ ಟಿ.ಎ., ಸಿ.ಎನ್. ಮಂಜೇಗೌಡ ಮತ್ತು ಸೂರಜ್ ರೇವಣ್ಣ ಅವರುಗಳು

| | |
|---|---|
| ಕೆ.ಎ. ತಿಪ್ಪೇಸ್ವಾಮಿ, ಶರವಣ ಟಿ.ಎ., ಸಿ.ಎನ್. ಮಂಜೇಗೌಡ ಮತ್ತು ಸೂರಜ್ ರೇವಣ್ಣ ಅವರುಗಳು | ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ಬೆಂಗಳೂರು ವಿಧಾನ ಸಭಾ ಕ್ಷೇತ್ರದ ಮತದಾರರಲ್ಲಿ ಮತದಾನದ ಬಗ್ಗೆ ಜಾಗೃತಿ ಮತ್ತು ಅರಿವು ಮೂಡಿಸಲು ನೇಮಿಸಲಾಗಿದ್ದ "ಚಿಲುಮೆ" ಖಾಸಗಿ ಸಂಸ್ಥೆಯು ಮತದಾರರ ಮಾಹಿತಿಗಳನ್ನು ಕಲೆಹಾಕುವ ಮೂಲಕ ಅಕ್ರಮವೆಸಗಿರುವ ಕುರಿತು. |

## ೦೬. ಖಾಸಗಿ ಸದಸ್ಯರ ಕಾರ್ಯಕಲಾಪ

### ಖಾಸಗಿ ನಿರ್ಣಯ

ಶ್ರೀ ಯು.ಬಿ. ವೆಂಕಟೇಶ್ ಅವರು ಈ ಕೆಳಕಂಡ ಖಾಸಗಿ ನಿರ್ಣಯವನ್ನು ಮಂಡಿಸುವುದು:–

"ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡುವ ಕುರಿತು"

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.

**www.kla.kar.nic.in/council/council.htm**